ಶ್ರೀ ಬಿ. ಆರ್. ಯಾವಗಲ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ. ಈ ಬಗ್ಗೆ ನನ್ನ ಹತ್ತಿರ ಈಗ ಯಾವುದೇ ಮಾಹಿತಿಯೂ ಇಲ್ಲ. ಇದನ್ನು ಸಂಬಂಧಪಟ್ಟ ಮಾನ್ಯ ಸಚಿವರಿಗೆ ಮುಂದಿನ ಕ್ರಮಕ್ಕಾಗಿ ತಿಳಿಸುತ್ತೇನೆ.

೧೨-೫೦ ಪಿ. ಎಂ.

(೯) ಉ. ಕ. ಜಿಲ್ಲೆಯಂ ದಾಂಡೇಲಿ ಮುಂತ್ತಿತರ ಪಟ್ಟಣಗಳಲ್ಲಿ ಕೊಡತಕ್ಕ ರಿಕ್ಷಾ ಪರವಾನಿಗೆ.

ಶ್ರೀ ಆರ್. ಎನ್. ನಾಯಕ್.— ದಾಂಡೇಲಿ ಪಟ್ಟಣದಲ್ಲಿ ಮುಖ್ಯವಾಗಿ ಹಾಗೂ ಉತ್ತರ ಕನ್ನಡ ಜಿಲ್ಲೆಯಂ ಉಳಿದ ಪಟ್ಟಣಗಳಲ್ಲಿ ಜನಸಂಖ್ಯೆಗನುಗುಣವಾಗಿ ಆಟೋರಿಕ್ಷಾಗಳ ಅವಶ್ಯಕತೆ ಹೆಚ್ಚುತ್ತಲಿದೆ. ಆಟೋರಿಕ್ಷಾಗಳನ್ನು ಹಲವಾರು ಜನರಂ ಸ್ವ ಉದ್ಯೋಗ ಯೋಜನೆ ಅಡಿಯಲ್ಲಿ ಕೊಂಡು ನಡೆಸುತ್ತಲಿದ್ದು ಅವರುಗಳಿಗೆ ಈತನಕ ಅವಶ್ಯವುಳ್ಳ ಪರ್‌ಮಿಂಟ್ ಸಿಕ್ಕಿಲ್ಲ. ಹಲವಾರು ಜನ ಪರ್ಮಿಟ್ ಸಿಗದೇ ಇದ್ದುದರಿಂದ ಆಟೋರಿಕ್ಷಾಗಳನ್ನು ಓಡಿಸಲಾರದೇ ಹಾನಿಗೊಳಗಾಗಿದ್ದಾರೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಾಗಲೇ ಸಾಕಷ್ಟು ಚಾಲಕರು, ಮಾಲೀಕರು ಪರ್ಮಿಟ್ ಬಗ್ಗೆ ಅರ್ಜಿ ಮಾಡಿಕೊಂಡಿದ್ದಾಗ್ಯೂ ಅವರಿಗೆ ಪರ್ಮಿಟ್ ಸಿಕ್ಕಿಲ್ಲ. ಕಾರಣ ಮುಖ್ಯವಾಗಿ ದಾಂಡೇಲಿ ಪಟ್ಟಣಕ್ಕೆ ಹಾಗೂ ಉತ್ತರ ಕನ್ನಡ ಜಿಲ್ಲೆಯ ಇತರ ಪಟ್ಟಣಗಳಿಗೆ ಪರ್ಮಿಟ್ ಜೋಟಾ ಜಾಸ್ತಿಮಾಡಿ ಮತ್ತು ಇದ್ದ ಆಟೋರಿಕ್ಷಾಗಳಿಗೆ ಕೂಡಲೇ ಪರ್ಮಿಟ್ ಕೊಡುವುದರ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು).— ಮಾನ್ಯ ಅಧ್ಯಕ್ಷರೆ, ಆಟೋರಿಕ್ಷಾಗಳ ಪರ್ಮಿಟ್ ಬಗ್ಗೆ ನನಗೆ ಯಾವುದೇ ರೀತಿಯ ಆಶ್ವಾಸನೆಗಳು ಈ ಸಭೆಯಲ್ಲಿಯೇ ತಕ್ಷಣ ಕೊಡಲು ಕಷ್ಟವಾಗುತ್ತದೆ. ನಾನು ಜಿಲ್ಲಾಧಿಕಾರಿಗಳ ಜೊತೆಗೆ ಮಾತನಾಡಿ ತೀರ ಅಗತ್ಯ ಕಂಡುಬಂದಲ್ಲಿ, ಇದರ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇನೆ.

(೧೦) ಶಿವಮೊಗ್ಗ ಜಿಲ್ಲೆಯಲ್ಲಿ ಲೆವಿ ಸಂಗ್ರಹಣೆಗೆ ಸಬ್-ಏಜೆಂಟಿನ ನೇಮಕ

ಶ್ರೀ ಬಿ. ಸ್ವಾಮಿರಾವ್.— ಮಾನ್ಯ ಅಧ್ಯಕ್ಷರೆ, ೧೯೭೫-೭೬ರಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಶಿವಮೊಗ್ಗ ಜಿಲ್ಲೆಯಂ ೨೦ ಅಕ್ಕಿ ಗಿರಣಿಗಳಿಗೆ ಮುಂಕ್ತ ಮಾರುಕಟ್ಟೆಯಲ್ಲಿ ಭತ್ತವನ್ನು ಖರೀದಿಸಲು ಸಬ್ ಏಜೆಂಟ್‌ರಾಗಿ ನೇಮಿಸಿದ್ದು ನಿಜವೇ ? ನಿಜವಾದ ಪಕ್ಷದಲ್ಲಿ ಅವರಿಂದ ಸಂಗ್ರಹಿಸಿದ ಭತ್ತವೆಷ್ಟು ? ಇದಕ್ಕಾಗಿ ಅವರಿಗೆ ಕೊಟ್ಟ ಮುಂಗಡ ಹಣವೆಷ್ಟು ? ಮತ್ತು ಅವರಿಂದ ಬರಬೇಕಾದ ಹಣವೆಷ್ಟು ? ಸುಮಾರು ಕೋಟಿ ರೂಪಾಯಿ ಬಾಕಿ ಇರುವುದಾಗಿಯೂ ೧೦-೧೨ ವರ್ಷ ಗಳಿಂದಲೂ ಈ ಸಾರ್ವಜನಿಕ ಹಣವನ್ನು ಇದುವರೆಗೆ ವಸೂಲಾತಿ ಮಾಡದೇ ಇರುವುದು ಸರ್ಕಾರದ ಅದಕ್ಷತೆ ಅಲ್ಲವೇ ? ಈ ಸಂದರ್ಭದಲ್ಲಿ ಪ್ರಸ್ತುತ ಪರಿಸ್ಥಿತಿಯಲ್ಲಿ ಹಣ ವಸೂಲಾತಿಯ ಬಗ್ಗೆ ನೇರ ಕ್ರಮ ತೆಗೆದುಕೊಳ್ಳದಿರುವ ಬಗ್ಗೆ ಆಹಾರ ಮಂತ್ರಿಗಳ ಗಮನ ಸೆಳೆಯುತ್ತೇನೆ,

ಅಧ್ಯಕ್ಷರು.— ದಿವಂಗತ ಶ್ರೀ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳು ಆಗಿದ್ದಾಗ ನಿಂದಲೂ ಇದು ನಡೆದುಬಂದಿದೆ. ಇದು ೧೦ ವರ್ಷಗಳಿಂದ ಇದೆ, ಪಿ. ಯು. ಸಿ. ಕಮಿಟಿಯವರು ರಿಪೋರ್ಟ್ ಕೊಟ್ಟಿದ್ದಾರೆ. ಇದು ತುಂಬಾ ಸೀರಿಯಸ್ ಆಗಿದೆ.

ಶ್ರೀ ಬಿ. ಬಸವಣ್ಣಪ್ಪ (ಆಹಾರ ಸಚಿವರು).— ಮಾನ್ಯ ಸದಸ್ಯರಾದ ಶ್ರೀ ಸ್ವಾಮಿರಾವ್‌ರವರು ಹೇಳಿದಹಾಗೆ, ಆಹಾರ ನಿಗಮವು ಶಿವಮೊಗ್ಗದಲ್ಲಿ ೨೦ ಅಕ್ಕಿ ಗಿರಣಿ ಮಾಲೀಕರು ಮುಂಕ್ತ ಮಾರುಕಟ್ಟೆಯಲ್ಲಿ ಮಾರಾಟಮಾಡಲಂ ಸಬ್ ಏಜೆಂಟರನ್ನು ನೇಮಿಸಿರುವುದು ನಿಜ. ಆದರೆ, ಆಹಾರ ನಿಗಮದ ಹಾಗೂ ಮಿಲ್ ಮಾಲೀಕರ ಅಗ್ರಿಮೆಂಟ್ ಏನಿತ್ತು, ಅದನ್ನು ೨೦ ಮಿಲ್ ಮಾಲೀಕರು ಉಲ್ಲಂಘನೆ ಮಾಡಿದರು. ಆದ್ದರಿಂದ ಹಿಂದಿನ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಿತ್ತು. ಆದರೆ, ನಮ್ಮ ಜನತಾ ಸರ್ಕಾರವು ಬಂದ ತಕ್ಷಣ, ನವೆಂಬರ್ ೮೩ ರಲ್ಲಿ asper the agreement, we have appointed a Senior IAS Officer Sri Nagaraja Setty as an Arbitrator. He has passed an award. ಸುಮಾರು ೩ ಕೋಟಿ ರೂಪಾಯಿ ಹಣವನ್ನು ಆಹಾರ ನಿಗಮಕ್ಕೆ